ಮೊದಲನೇ ಪ್ರಕರಣದಲ್ಲಿ ಗೌರಿ ಪೂಜಾರ್ತಿ ಕೊಲೆಯಾಗಿದ್ದಾರೆ ಎಂದು ವರ್ತಮಾನ ಇದೆ. ಅವರನ್ನು ಹುಡುಕುವುದು ಬಿಟ್ಟು, ಅವರು ಎಷ್ಟು ವರ್ಷದ ಹಿಂದೆ ಗಂಡನನ್ನು ಬಿಟ್ಟರು, ಎಷ್ಟು ಅಕ್ರಮ ಸಂಬಂಧ ಇಟ್ಟುಕೊಂಡಿದ್ದಾರೆ, ಅವರಿಗೆ ಎಷ್ಟು ಮಕ್ಕಳು ಹುಟ್ಟಿದ್ದಾರೆ ಇದು ಬೇಕಾಗಿಲ್ಲ. ನ್ಯಾಯವಾದ ರೀತಿಯಲ್ಲಿ ವಿಚಾರಣೆ ಆಗಬೇಕು.

ಶ್ರೀ ರಾಮಕೃಷ್ಣ ಹೆಗಡೆ:— ಇದನ್ನು ಸಿಐಡಿಗೆ ವಹಿಸಿರುವುದರಿಂದ ಇದರಲ್ಲಿ ಸತ್ಯಾಂಶ ಏನಿದೆ ಎಂಬುದು ಹೊರಗಡೆ ಬರುತ್ತದೆ. ಗೌರಿ ಪೂಜಾರ್ತಿಯನ್ನು ಹುಡುಕಿಕೊಂಡು ಹೋಗಿ ಸಂಗ್ರಹಿಸಿದ ಮಾಹಿತಿಯನ್ನು ತಮ್ಮ ಮುಂದಿಟ್ಟಿದ್ದೇನೆ. ಅವಳೂ ಒಬ್ಬ ಮನುಷ್ಯ ಎಂಬ ಭಾವನೆಯಿಂದ ಕೆಲಸ ಮಾಡಿದ್ದೇವೆ.

೨) ಬೆಂಗಳೂರು ಹೋಟೆಲ್‌ಗಳಲ್ಲಿರುವ ವಸತಿ ಗೃಹಗಳಿಗೆ ದುಬಾರಿ ಬಾಡಿಗೆ ಪಡೆಯಲಾಗುತ್ತಿರುವುದು.

ಶ್ರೀ ಆರ್. ವೆಂಕಟರಾಮಯ್ಯ:—ಮಾನ್ಯ ಅಧ್ಯಕ್ಷರೆ, ಬೆಂಗಳೂರು ಹೋಟೆಲ್‌ಗಳಲ್ಲಿರುವ ವಸತಿ ಗೃಹಗಳಿಗೆ ದುಬಾರಿ ಬಾಡಿಗೆ ಪಡೆಯಲಾಗುತ್ತಿರುವುದು ಮತ್ತು ಧಾರಣೆಗಳನ್ನು ಹೆಚ್ಚಿಸುತ್ತಿರುವುದನ್ನು ನಿಯಂತ್ರಿಸದೇ ಇರುವುದರಿಂದ ಜನರಿಗೆ ಆಗಿರುವ ತೊಂದರೆಯ ಬಗ್ಗೆ ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಸವರಾಜ್ ಅನ್ವರಿ (ಮಾನ್ಯ ಆಹಾರ ಮತ್ತು ನಾಗರೀಕ ಪೂರೈಕೆ ಖಾತೆಯ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೆ, ಈ ವಿಚಾರ ಸಂಪೂರ್ಣವಾಗಿ ನನ್ನ ಖಾತೆಗೆ ಬರದಿರುವುದರಿಂದ ನನ್ನ ಇಲಾಖೆಗೆ ಸಂಬಂಧಪಟ್ಟಂತೆ ಬರುವುದಕ್ಕೆ ಮಾತ್ರ ನಾನು ಈ ಹೇಳಿಕೆಯನ್ನು ಕೊಡಬಯಸುತ್ತೇನೆ.

ನಮ್ಮ ರಾಜ್ಯದಲ್ಲಿ ಆದರಲ್ಲೂ ಬೆಂಗಳೂರು ನಗರದಲ್ಲಿ ಮೂರು ದರ್ಜೆಯ ಹೋಟೆಲುಗಳು ಇರುತ್ತವೆ. ಅವುಗಳನ್ನು "ಎ" ದರ್ಜೆ ಮತು "ಬಿ" ದರ್ಜೆ ಮತು "ಸಿ" ದರ್ಜೆ ಎಂದು ವಿಂಗಡಿಸಿರುತ್ತಾರೆ.

"ಎ" ದರ್ಜೆಯ ಹೋಟೆಲುಗಳಲ್ಲಿ ಸಾಮಾನ್ಯವಾಗಿ "ಬಿ" ಮತ್ತು "ಸಿ" ದರ್ಜೆ ಹೋಟೆಲುಗಳಿಗಿಂತ ಬೆಲೆಗಳು ಹೆಚ್ಚಾಗಿರುತ್ತವೆ ಸರ್ಕಾರದ ವತಿಯಿಂದ ಹೋಟೆಲ್‌ಗಳ ತಿಂಡಿಗಳ ಬೆಲೆಯನ್ನು ಇಳಿಸಲು ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು ದಿನಾಂಕ. ೨೫-೧-೧೯೮೮ ರಂದು ಸಗಟು ಆಹಾರ ಧಾನ್ಯ ಮತ್ತು ದ್ವಿದಳ ಧಾನ್ಯ ವರ್ತಕರ ಸಂಘ ಮತ್ತು ಆಹಾರ ಧಾನ್ಯ ವರ್ತಕರ ಸಂಘ, ಬೆಂಗಳೂರು ಇವರ ಸಭೆಯನ್ನು ಹಾಗೂ ದಿನಾಂಕ. ೩-೨-೧೯೮೮ ರಂದು ಹೋಟೆಲು ಮಾಲೀಕರ ಸಂಘದ ಪದಾಧಿಕಾರಿಗಳು ಆಹಾರಧಾನ್ಯ (ಸಗಟು) ಹಾಗೂ ದ್ವಿದಳ ಧಾನ್ಯ ವರ್ತಕರ ಸಂಘ ಮತ್ತು ಆಹಾರಧಾನ್ಯ (ಗ್ರೈನ್ಸ್) ವರ್ತಕರ ಸಂಘದ ಪದಾಧಿಕಾರಿಗಳೊಂದಿಗೆ ಸಭೆಯನ್ನು ಕಾರ್ಯದರ್ಶಿಗಳು ಆಹಾರ ಮತ್ತು ಸಾರಿಗೆ ಇಲಾಖೆಯವರ ಅಧ್ಯಕ್ಷತೆಯಲ್ಲಿ ಜರುಗಿಸಲಾಗಿದೆ. ಈ ಸಭೆಯಲ್ಲಿ ಹೋಟೆಲು ಪದಾಧಿಕಾರಿಗಳನ್ನು ಹಾಲಿ ಜಾರಿಯಲ್ಲಿರುವ ಬೆಲೆಗಳನ್ನು ಕಡಿಮೆ ಮಾಡುವಂತೆ ಕೇಳಲಾಯಿತು. ಈ ಬಗ್ಗೆ ಸಂಘದ ಅಧ್ಯಕ್ಷರು ಇತ್ತೀಚೆಗೆ ಆಗತ್ಯ ವಸ್ತುಗಳ ಹೆಚ್ಚಳ, ವಿದ್ಯುಚ್ಛಕ್ತಿ ಹಾಲು, ತರಕಾರಿ ಮುಂತಾದ ಕಚ್ಚಾ ವಸ್ತುಗಳ ಬೆಲೆಗಳು ವಿಪರೀತವಾಗಿ ಹೆಚ್ಚಾಗಿರುವುದರಿಂದ ತಿಂಡಿ ತಿನಿಸುಗಳು ಬೆಲೆಯನ್ನು ಅನಿವಾರ್ಯವಾಗಿ ಹೆಚ್ಚಿಸಬೇಕಾಯಿತೆಂದೂ ಅಲ್ಲದೆ ಈ ಬೆಲೆ ಏರಿಕೆಗೆ ಬಾಡಿಗೆ, ವಹಿವಾಟು ತೆರಿಗೆ, ವೈಭವ ತೆರಿಗೆ, ನೌಕರರ ಭವಿಷ್ಯ ನಿಧಿ, ಸಂಬಳ ಇತ್ಯಾದಿಗಳ ಏರಿಕೆಯೂ ಕಾರಣವೆಂದು ತಿಳಿಸಿರುತ್ತಾರೆ.

ಶ್ರೀ ಆರ್. ವೆಂಕಟರಾಮಯ್ಯ:—ಮಾನ್ಯ ಅಧ್ಯಕ್ಷರೆ, ೧೯೮೩ ರಲ್ಲಿ ಇಡ್ಲಿ ಬೆಲೆ ೨೫ ಪೈಸೆ ಇದ್ದುದು ಇವತ್ತು ೧.೨೫ ರೂಪಾಯಿ ಆಗಿದೆ, ಮಸಾಲೆ ದೋಸೆ ೧ ರೂಪಾಯಿ ಇದ್ದುದು ಇವತ್ತು ೫ ರೂಪಾಯಿ ಆಗಿದೆ, ಕಾಫಿ ೫೦ ಪೈಸೆ ಇದ್ದುದು ಇವತ್ತು ೧.೫೦ ರೂಪಾಯಿ ಆಗಿದೆ. ನೀವು ಎ.ಬಿ.ಸಿ. ಎಂದು ಇಟ್ಟುಕೊಂಡಿರುವುದರಿಂದ ಇಷ್ಟೊಂದು ಧಾರಣೆಗಳು ಹೆಚ್ಚುವುದಕ್ಕೆ ಅವಕಾಶವಾಗಿದೆ, ಸಾಧಾರಣ ಊಟ ೫ ರೂಪಾಯಿಯಿಂದ ೮ ರೂಪಾಯಿವರೆವಿಗೂ ಪ್ಲೇಟ್ ಮಿಲ್ಸ್ ಇದೆ. ಕಷ್ಟಪಟ್ಟು ದುಡಿಯತಕ್ಕ ಒಬ್ಬ ವ್ಯಕ್ತಿ ಇವತ್ತು ೧೦ ರೂಪಾಯಿಯಷ್ಟು ತಿಂದರೂ ಹೊಟ್ಟೆ ತುಂಬುವುದಿಲ್ಲ.

ಇದನ್ನು ತಾವು ಹತೋಟಿಗೆ ತೆಗೆದುಕೊಳ್ಳದಿದ್ದರೆ ಬಡವರಿಗೆ ಬಹಳ ಕಷ್ಟವಾಗುತ್ತದೆ. ದಯವಿಟ್ಟು ಇದನ್ನು ಕಂಟ್ರೋಲ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಹಿಂದೆ ಮಾನ್ಯ ಶ್ರೀರಾವಂಯಲು ಎನ್ನುವವರು ಮಂತ್ರಿಗಳಾಗಿದ್ದಾಗ ಹೋಟೆಲ್‌ಗಳಲ್ಲಿ ತಿಂಡಿತಿನಿಸುಗಳ ಬೆಲೆಗಳನ್ನು ಹತೋಟಿಗೆ ತಂದಿದ್ದರು. ಕೆಲವು ದಿವಸಗಳ ನಂತರ ಅವರನ್ನು ಅವರ ಮಂತ್ರಿ ಕೆಲಸದಿಂದಲೇ ತೆಗೆದುಹಾಕಿದರು. ಇದನ್ನು ಜ್ಞಾಪಿಸಿಕೊಂಡು ನೀವು ಏನಾದರೂ ಈ ಹೋಟೆಲ್‌ನವರಿಗೆ ಧಮಾಕಿ ಹಾಕುತ್ತಿದ್ದೀರಾ ? ಇವತ್ತು ಇಡೀ ರಾಜ್ಯದಲ್ಲಿ ನಮ್ಮ ಬೆಂಗಳೂರು ಬಹಳ ದುಬಾರಿ ನಗರವಾಗಿದೆ. ಇದನ್ನು ಕಂಟ್ರೋಲ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಸವರಾಜ್ ಪಾಟೀಲ್ ಅನ್ವರಿ.—ಸ್ವಾಮಿ, ನಾವು ನಮ್ಮ ಸರ್ಕಾರದ ವತಿಯಿಂದ ಹೋಟೆಲು ಮಾಲೀಕರಿಗೆ ಯಾವುದೇ ಆಹಾರಧಾನ್ಯಗಳನ್ನೂ ಪಡಿತರ ವ್ಯವಸ್ಥೆಯಲ್ಲಿ ಅಲಾಟ್ ಮಾಡುವುದಿಲ್ಲ. ಇವರು ಪ್ರತಿಯೊಂದನ್ನೂ ಓಪನ್ ಮಾರ್ಕೆಟ್‌ನಲ್ಲಿ ತಂದು ತಯಾರಿಸಬೇಕಾಗುತ್ತದೆ. ಇದರ ಬಗ್ಗೆ ನಾವು ಕೇಂದ್ರಸರ್ಕಾರದ ಜೊತೆ ಪತ್ರವ್ಯವಹಾರ ಮಾಡಿ ಹೋಟೆಲ್ ಮಾಲೀಕರಿಗೆ ಗೋಧಿ, ಎಣ್ಣೆ, ಸಕ್ಕರೆ ಇವುಗಳನ್ನು ಹೆಚ್ಚಿಗೆ ಕೋಟಾ ಕೊಟ್ಟರೆ ಹೋಟೆಲ್ ತಿಂಡಿತಿನಿಸುಗಳ ಬೆಲೆ ಕಡಿಮೆ ಮಾಡುವುದಕ್ಕೆ ಅನುಕೂಲವಾಗುತ್ತದೆಂದು ಹೇಳಿದ್ದೇವೆ. ಹೋಟೆಲ್ ಮಾಲೀಕರ ಮನವೊಲಿಸಲು ಪ್ರಯತ್ನಮಾಡುತ್ತಿದ್ದೇವೆ. ನಾನು ಈಗ ತಾನೇ ಹೇಳಿದಂತೆ ಕೇಂದ್ರ ಸರ್ಕಾರದವರು ಗೋಧಿ, ಎಣ್ಣೆ, ಸಕ್ಕರೆ ಇವುಗಳನ್ನು ಹೆಚ್ಚಿಗೆ ಅಲಾಟ್‌ಮೆಂಟ್ ಮಾಡಿದರೆ ಹೋಟೆಲ್‌ಗಳಲ್ಲಿ ತಿಂಡಿ ತಿನಿಸುಗಳ ಬೆಲೆಗಳನ್ನು ಹತೋಟಿಯಲ್ಲಿಡಲು ನನ್ನ ಕೈಲಾದ ಪ್ರಯತ್ನವನ್ನು ಮಾಡುತ್ತೇನೆಂದು ಹೇಳಬಯಸುತ್ತೇನೆ.

ಶ್ರೀ ಆರ್ ವೆಂಕಟರಾಮಯ್ಯ.—೧೯೮೩ ರಿಂದ ಇಲ್ಲಿಯವರೆಗೆ ಅಕ್ಕಿಯ ಬೆಲೆ ೫ ರಷ್ಟು ಹೆಚ್ಚಾಗಿಲ್ಲ. ಆದರೆ ಇವರು ಮಾತ್ರ ದರವನ್ನು ೫ ರಷ್ಟು ಹೆಚ್ಚು ಮಾಡಿದ್ದಾರೆ. ಈ ಬಗ್ಗೆ ಹೇಳಿದರೆ ಕೇಂದ್ರವನ್ನು ಕೇಳುತ್ತೇವೆಂದು ಹೇಳುತ್ತಿದ್ದೀರಿ. ಆಪರೂ ರೇಟ್ ಹೆಚ್ಚು ಮಾಡುವುದರ ಜೊತೆಗೆ ಇಡ್ಲಿಯ ಸೈಜನ್ನು ಚಿಕ್ಕದು ಮಾಡುತ್ತಾ ಬಂದಿದ್ದಾರೆ. ದುರಾದೃಷ್ಟ ಬೆಂಗಳೂರಿಗೆ ಯಾರು ಬಂದರೂ ವಿಧಿಯಿಲ್ಲದೇ ಇದನ್ನೂ ತಿನ್ನಬೇಕಾಗಿದೆ. ತಾವು ಇದನ್ನೆಲ್ಲಾ ಕಂಟ್ರೋಲ್ ಮಾಡಬೇಕು. ಏಕೆ ತಾವು ಹಿಂದೇಟು ಹಾಕುತ್ತಿದ್ದೀರೋ ನನಗೆ ಗೊತ್ತಿಲ್ಲ. ಇನ್ನೊಂದು ಸಮಸ್ಯೆ ಎಂದರೆ ಲಾಡ್ಜಿಂಗ್‌ದು. ಆಗ ೨೫ ರೂಪಾಯಿ ಬಾಡಿಗೆ ಇದ್ದದ್ದು ಈಗ ೧೫೫ ರೂಪಾಯಿ, ೨೦೦ ರೂಪಾಯಿ ಆಗಿದೆ. ಮಾನ್ಯ ಮೊಮ್ಮಾಯಿಯವರು ಇದನ್ನು ಕಂಟ್ರೋಲ್ ಮಾಡಬೇಕಾಗಿದೆ. ಈ ರೇಟ್ ವಿಷಯ ಅವರಿಗೆ ಬರುತ್ತದೆ ಅವರಂತೂ ಹೋಟೆಲ್‌ಗಳಲ್ಲಿ ರೂಮ್ ಮಾಡುವುದಕ್ಕೆ ಹೋಗುವುದಿಲ್ಲ. ಯಾರಾದರೂ ಮಾಡಿದವರು ಇವರಿಗೆ ಹೇಳಬೇಕು. ಈ ಎರಡೂ ವಿಷಯಗಳ ಬಗ್ಗೆ ಕಮಿಟಿ ಮಾಡಿದ್ದೇವೆಂದು ಹೇಳುತ್ತೀರಿ. ಈ ಕಮಿಟಿಯ ರಿಪೋರ್ಟ್ ಯಾವಾಗ ಕಂಪ್ಲೀಟ್ ಆಗುತ್ತದೆ ? ಇನ್ನು ಒಂದು ಎರಡು ತಿಂಗಳಲ್ಲಿ ತಾವು ಇದನ್ನು ಕಂಟ್ರೋಲ್ ಮಾಡಿ ತಿಂಡಿತೀರ್ಥಗಳ ಬೆಲೆ ಕಡಿಮೆಗೊಳಿಸಬೇಕು. ಹಿಂದೆ ವಿದ್ಯಾರ್ಥಿಗಳು ಚಳುವಳಿ ಮಾಡುತ್ತಿದ್ದರು. ದುರಾದೃಷ್ಟವಶಾತ್ ಜನತಾ ಸರ್ಕಾರ ಬಂದ ಮೇಲೆ ವಿದ್ಯಾರ್ಥಿಗಳು ಈ ಬಗ್ಗೆ ಚಳುವಳಿ ಮಾಡುವುದಕ್ಕೆ ಹೋಗುತ್ತಿಲ್ಲ.

ಅಧ್ಯಕ್ಷರು.—ರಾಜಕೀಯ ಮಾಡಲು ಹೊರಟಿರಲ್ಲಾ ?

ಶ್ರೀ ಆರ್. ವೆಂಕಟರಾಮಯ್ಯ.—ಈಗಲಾದರೂ ಪ್ರಯತ್ನ ಮಾಡಿ ಕಡಿಮೆ ಮಾಡಿಸುತ್ತೀರಾ ? ಆ ವರದಿ ಯಾವಾಗ ಹೊರಬೀಳುತ್ತದೆ ?

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಮಾನ್ಯ ಸದಸ್ಯರು ಹೇಳುವ ರೀತಿಯಲ್ಲಿ ನಾವು ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕೆಂದರೆ ನಾವು ಆವರಿಗೆ ಪಡಿತರ ಆಹಾರಧಾನ್ಯಗಳನ್ನು ಒದಗಿಸಬೇಕಾಗುತ್ತದೆ. ಈಗಿರತಕ್ಕ ಪರಿಸ್ಥಿತಿಯಲ್ಲಿ ಸೋಜಿ ಎಣ್ಣೆ, ಸಕ್ಕರೆಯನ್ನು ಪಡಿತರ ವ್ಯವಸ್ಥೆಯಲ್ಲಿ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಬಗ್ಗೆ ಕೇಂದ್ರ ಸರ್ಕಾರದವರಿಗೆ ಮನವಿ ಮಾಡಿಕೊಂಡಿದ್ದೇವೆ. ಹೆಚ್ಚಿನ ಆಪಾರಧಾನ್ಯ, ಸಕ್ಕರೆ, ಸೋಜಿ, ಗೋಧಿಯನ್ನು ಕೊಡುವುದಕ್ಕೆ ಅನುಕೂಲವನ್ನು ಮಾಡಿಕೊಟ್ಟರೆ ಆ ಮೂಲಕ ಬೆಲೆ ನಿಯಂತ್ರಣ ಮಾಡುವುದಕ್ಕೆ ಹೆಚ್ಚಿನ ಅನುಕೂಲವಾಗುತ್ತದೆ, ಈಗ ಅವರು ಓಪನ್ ಮಾರ್ಕೆಟ್‌ನಲ್ಲಿ ಇವನ್ನೆಲ್ಲಾ ಪಡೆಯುತ್ತಿರುವುದರಿಂದ ಇದೆಲ್ಲಾ ಸಾಧ್ಯವಾಗುವುದಿಲ್ಲ. ತಾವು ಕೊಟ್ಟ ಸೂಚನೆಯ ಪ್ರಕಾರ ಹೋಟೆಲ್ ಮಾಲೀಕರನ್ನು ಕರೆಸಿ ಇನ್ನೊಂದು ಸಭೆ ಮಾಡಿ ಈ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.